


International Journal of Kannada Research
www.kannadajournal.com

**ISSN: 2454–5813**
IJKR 2020; 6(3): 23-29
© 2020 IJKR
www.kannadajournal.com
Received: 19-05-2020
Accepted: 21-06-2020

**ಡಾ. ಜ್ಯೋತಿ**
**ಆಂಗ್ಲ ವಿಭಾಗ, ಸಹಾಯಕ ಪ್ರಾಧ್ಯಾಪಕರು, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು ವಿಶ್ವವಿದ್ಯಾನಿಲಯ**

Corresponding Author:
**ಡಾ. ಜ್ಯೋತಿ**
**ಆಂಗ್ಲ ವಿಭಾಗ, ಸಹಾಯಕ ಪ್ರಾಧ್ಯಾಪಕರು, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು ವಿಶ್ವವಿದ್ಯಾನಿಲಯ**

# ಅಭಿನಯ ಕಲಾ ವಿಶ್ವವಿದ್ಯಾನಿಲಯ: ಡಾ. ರಾಜಕುಮಾರ್

**ಡಾ. ಜ್ಯೋತಿ**

ಕನ್ನಡಿಗ ಕಲಾಸಕ್ತರಿಗೆ, ಅಭಿನಯ ಎಂದರೆ ನೆನಪಾಗುವ ಹೆಸರೊಂದೇ, ಅದೇ ಸಿಂಗನಲ್ಲೂರು ಪುಟ್ಟಸಾಮಯ್ಯ ಮುತ್ತುರಾಜ್ ಅರ್ಥಾತ್ ನಟಸಾರ್ವಭೌಮ ಎಂದು ಖ್ಯಾತಿ ಪಡೆದಿರುವ ಹೆಮ್ಮೆಯ ಕನ್ನಡಿಗ ಡಾ. ರಾಜಕುಮಾರ್. ಅವರ ತಂದೆ ಸಿಂಗನಲ್ಲೂರು ಪುಟ್ಟಸಾಮಯ್ಯ, ಗುಬ್ಬಿ ವೀರಣ್ಣ ನಾಟಕ ಕಂಪನಿಯಲ್ಲಿ ಆಗಲೇ ಹೆಸರಾಂತ ಕಲಾವಿದರಾಗಿದ್ದರು. ಹೆಚ್ಚಾಗಿ ರಾವಣ, ಕಂಸ, ಯಮ ಇತ್ಯಾದಿ ಖಳನಾಯಕರ ಪಾತ್ರಗಳಿಂದ ಪ್ರಸಿದ್ಧರಾಗಿದ್ದ ಅವರು ವೇದಿಕೆ ಏರಿದರೆ, ಅವರ ನಟನಾ ಆವೇಶಕ್ಕೆ ಪ್ರೇಕ್ಷಕವರ್ಗ ಭಯಬೀಳುವಷ್ಟು ಸಹಜವಾಗಿತ್ತು, ಅವರ ಅಭಿನಯ. ಊರಿಂದ ಊರಿಗೆ ನಾಟಕ ಪ್ರದರ್ಶನ ನೀಡಲು ಪ್ರಯಾಣಿಸುತ್ತಿದ್ದ ಕುಟುಂಬದಲ್ಲಿ ಹುಟ್ಟಿದ ಮುತ್ತುರಾಜ್ ಬೆಳೆದದ್ದೇ ನಾಟಕ ನೋಡುತ್ತಾ, ಮುಖ್ಯವಾಗಿ, ತನ್ನ ತಂದೆಯ ಸಹಜಾಭಿನಯವನ್ನು ಆಸ್ವಾದಿಸುತ್ತ. ಡಾ ರಾಜಕುಮಾರ್, ತನ್ನ ಕೊನೆಯ ದಿನಗಳವರೆಗೂ ಬಹಳ ಗೌರವ ಮತ್ತು ವಿನಯದಿಂದ ಹೇಳುತ್ತಿದ್ದ ಮಾತೊಂದೆ, 'ನನ್ನ ತಂದೆಯ ತರಹ ಪಾತ್ರದಲ್ಲಿ ಲೀನವಾಗಿ ಸಹಜ ಅಭಿನಯ ನೀಡಲು ನನಗೆ ಸಾಧ್ಯವಾಗಲೇ ಇಲ್ಲ. ನಾನು ಬಹಳ ಕಷ್ಟ ಪಡುತ್ತಿದ್ದೆ. ಆದರೆ ಜನ, ಅದನ್ನೇ ದೊಡ್ಡದಾಗಿ ಸ್ವೀಕರಿಸಿದರು.' ವಾರಕ್ಕೆ ೪೦ ರೂಪಾಯಿ ಸಂಬಳದಲ್ಲಿಯೇ ದೊಡ್ಡ ಕುಟುಂಬ ನಿರ್ವಹಣೆ ಮಾಡಬೇಕಾದ್ದರಿಂದ, ಅನಿವಾರ್ಯವಾಗಿ ಮುತ್ತುರಾಜ್ ೩ನೆ ತರಗತಿಗೆ ವಿದ್ಯಾಭ್ಯಾಸ ಮೊಟಕುಗೊಳಿಸಿ, ತಮ್ಮ ವರದರಾಜ್ ಮತ್ತು ತಂಗಿ ಶಾರದಮ್ಮರೊಂದಿಗೆ ಬಣ್ಣ ಹಚ್ಚಬೇಕಾಯಿತು.

ಮಾಸ್ಟರ್ ಹಿರಣ್ಣಯ್ಯ ಹೇಳುವಂತೆ, ಮುತ್ತುರಾಜ್, ಕನ್ನಡಿಗರ ಪ್ರೀತಿಯ ಡಾ ರಾಜಕುಮಾರ್ ಆಗಿ ಬೆಳೆಯಲು ಅವರು ತನ್ನ ತಂದೆತಾಯಿಯ ಮೇಲಿಟ್ಟ ಅಭಿಮಾನ, ಭಕ್ತಿ, ಪಿತೃವಾಕ್ಯ ಪರಿಪಾಲನೆಯೇ ಕಾರಣ. ಇದಕ್ಕೆ ಒಂದು ಉದಾಹರಣೆ, ತನ್ನ ತಂದೆ ಸತ್ತ ನಂತರವೂ ಅವರು ಕೊಟ್ಟ ಮಾತು ಮೀರಬಾರದೆಂದು, ಸೋದರ ಸಂಬಂಧಿ ಪಾರ್ವತಮ್ಮರ ಮನೆಗೆ ಸ್ವತಃ ತಾವೇ ಹೋಗಿ, ಮನೆಯವರಲ್ಲಿ ಮದುವೆ ಮಾಡಿಕೊಡುವಂತೆ ಕೇಳಿ,

ಒತ್ತಾಯಿಸಿ ಮದುವೆಯಾಗಿ, ಹೆಂಡತಿಯನ್ನು ತನಗೆ ಸಮವಾಗಿ ಗೌರವದಿಂದ ಕೊನೆದಿನದವರೆಗೂ ನಡೆಸಿಕೊಂಡು ಬಂದ ಡಾ.ರಾಜಕುಮಾರ್ ಆದರ್ಶಪತಿಯಾಗಿ ಜನರಿಗೆ ಮಾದರಿಯಾಗಿದ್ದಾರೆ. ವೃತ್ತಿರಂಗದಲ್ಲಿ ಯಶಸ್ಸು ಸಿಕ್ಕಮೇಲೆ, ತನ್ನ ಕಷ್ಟದ ದಿನಗಳಲ್ಲಿ ಕೈಹಿಡಿದ ಹೆಂಡತಿ ಹಳೆಯದೆನಿಸಿ, ಮರುಮದುವೆಯಾಗುವ ಈ ಪೀಳಿಗೆಯ ಮುಂದೆ, ಡಾ ರಾಜ್ ಆದರ್ಶಪ್ರಾಯರಾಗಿ ಕಾಣಿಸುತ್ತಾರೆ.

ಇನ್ನು, ರಂಗಭೂಮಿ ಕಲಾವಿದ ಮುತ್ತುರಾಜ್, ಯಾವುದೇ ಜಾತಿ, ರಾಜಕೀಯ, ಮತಗಳ ಬೆಂಬಲ ಪಡೆಯದೆಯೇ ಸಮಸ್ತ ಕನ್ನಡಿಗರ ಆರಾಧ್ಯ ದೈವವಾದ ಡಾ ರಾಜಕುಮಾರ್ ಆಗಿ ಪರಿವರ್ತನೆಯಾದ ಹಿನ್ನಲೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ ನಮಗೆ ಹಲವಾರು ಅಂಶಗಳು ಗೋಚರಿಸುತ್ತವೆ. ಮುಖ್ಯವಾಗಿ ನಾವಿಲ್ಲಿ ಪರಿಶೀಲಿಸಬೇಕಾದ್ದು; ಅವರನ್ನು ತೆರೆಮೇಲಿನ ರಾಜಕುಮಾರ್ ಆಗಿ ರೂಪಿಸಿದ ಆಪ್ತರ ದೊಡ್ಡ ತಂಡ; ಅವರು ಆಯ್ದುಕೊಂಡ, ವೈವಿಧ್ಯದ ಎಲ್ಲ ವರ್ಗಕ್ಕೂ ಸಲ್ಲುವ ಪಾತ್ರಗಳು; ತನ್ನ ಪಾತ್ರಗಳಿಂದ ಕರ್ನಾಟಕದ ಚರಿತ್ರೆಯ ವೈಭವದ ಮರುಕಳಿಕೆ; ಪೌರಾಣಿಕ ಪಾತ್ರಗಳ ಮೂಲಕ ಪುರಾಣದ ಮರುಸೃಷ್ಟಿ; ಅಭಿಮಾನಿಗಳಲ್ಲಿ ದೇವರನ್ನು ಕಂಡ ವಿನಯತೆ; ನಿರ್ಮಾಪಕರನ್ನು ಅನ್ನದಾತದೆಂದ ಕೃತಜ್ಞತೆ; ವಯಸ್ಸಿನ ಭೇದಭಾವವಿಲ್ಲದೆ, ನಿರ್ದೇಶಕರಲ್ಲಿ ಗುರುವನ್ನು ಕಂಡ ವಿದ್ಯಾರ್ಥಿ ಮನೋಭಾವ; ಅಗಾಧ ಅಭಿಮಾನಿ ಸಮೂಹವಿದ್ದರೂ, ರಾಜಕೀಯ ಸೇರಿ ಮುಖ್ಯಮಂತ್ರಿಯಾಗುವ ಎಲ್ಲ ಅವಕಾಶವಿದ್ದರೂ, ಇಂತಹ ಆಮಿಷಗಳಿಂದ ಸದಾ ದೂರ ಕಾಯ್ದ ದೃಢನಿರ್ಧಾರ; ಕನ್ನಡಕ್ಕಾಗಿ ಗೋಕಾಕ್ ಚಳುವಳಿ ಮಾತ್ರವಲ್ಲದೆ, ತನಗೆ ಸಾಧ್ಯವಾದ ಎಲ್ಲ ಕನ್ನಡಪರ ಚಟುವಟಿಕೆಗಳ ಮೂಲಕ ಕನ್ನಡಿಗರ ಮನಗೆದ್ದ ಅಪ್ಪಟ ಕನ್ನಡಪ್ರೇಮ; ಸಹಕಲಾವಿದರನ್ನು ಸದಾ ಗೌರವದಿಂದ ಕಂಡು, ಭಾರತೀಯ ಸಿನೆಮಾರಂಗದ ಇತಿಹಾಸದಲ್ಲಿಯೇ ಪ್ರಥಮಬಾರಿ ಸೆಟ್ ನಲ್ಲಿ ಪಂಕ್ತಿಭೋಜನ ಪ್ರಾರಂಬಿಸಿದ ಹೃದಯ ವಿಶಾಲತೆ; ಜನರಿಗೆ ಮಾದರಿಯಾದ ಅವರ ಶಿಸ್ತಿನ ಜೀವನಶೈಲಿ; ಯೋಗ, ಪ್ರಾಣಾಯಾಮ, ವ್ಯಾಯಾಮಗಳ ಮೂಲಕ ಸದಾ ಆರೋಗ್ಯಕರ ದೇಹ ಕಾಪಾಡಿಕೊಂಡು ಅಭಿಮಾನಿಗಳಿಂದ ಮೆಚ್ಚುಗೆ ಪಡೆದು, ಪ್ರೇರಣಾ ಶಕ್ತಿಯಾದ ವ್ಯಕ್ತಿತ್ವ; ತನಗಿರುವ ಅಭಿಮಾನಿ ವರ್ಗಕ್ಕೆ ತನ್ನ ಸಿನೆಮಾದಿಂದ ಯಾವುದೇ ತಪ್ಪು ಸಂದೇಶ ಸಿಗದಂತೆ ತನ್ನೆಲ್ಲ ಸಿನೆಮಾಗಳಲ್ಲಿ ಜಾಗ್ರತೆ ಕಾಯ್ದುಕೊಂಡ ಜವಾಬ್ದಾರಿತನ; ಬೇರೆಲ್ಲಾ ನಟರನ್ನು ಗೌರವಿಸಿದರೂ, ಅವರನ್ನು ಅನುಕರಿಸದೆ, ನಟನೆಯಲ್ಲಿ ತನ್ನತನದ ಛಾಪು ಬಿಟ್ಟುಹೋದ ಸ್ವಂತಿಕೆ; ಒಪ್ಪಿಕೊಂಡ ಪಾತ್ರಕ್ಕೆ ಅವರು ಮಾಡಿಕೊಳ್ಳುತ್ತಿದ್ದ ಪೂರ್ವಸಿದ್ಧತೆ; ಅಭಿಮಾನಿಗಳಿಗೆ ಯಾವತ್ತೂ ನಿರಾಶೆ ಮಾಡದೆ, ಅವರ ಭೇಟಿಗೆ ಸಮಯ ನಿಗದಿಮಾಡಿದ ಹಿರಿಮೆ; ಭಕ್ತಿಗೀತೆಗಳನ್ನು ಹಾಡುವಾಗ ಮತ್ತು ನಟಿಸುವಾಗ ಚಪ್ಪಲಿ ಧರಿಸದ ಭಕ್ತಿ; ಮನೆಗೆ ಬಂದವರಿಗೆ ನೀಡುತಿದ್ದ ವಿಶೇಷ ಅತಿಥಿ ಸತ್ಕಾರ; ಅಭಿನಯದಲ್ಲಿ ಭಾವತನ್ಮಯತೆ; ಯಾರ ಭಾಗ್ಗೆಯೂ ಕೆಟ್ಟಮಾತನ್ನೂ ಆಡದ, ಬೇರೆಯವರು ಆಡುವುದನ್ನು ಉತ್ತೇಜಿಸದ ಮಹಾನ್ ವ್ಯಕ್ತಿತ್ವ; ಹಾಡುವುದು ಮೂಲವೃತ್ತಿಯಾಗಿರದಿದ್ದರೂ, ದಿನಕ್ಕೆ ಎರಡು ಗಂಟೆ ಸತತ ಅಭ್ಯಾಸ ಮಾಡಿ ನಾಡಿನ ಶ್ರೇಷ್ಠ ಗಾಯಕನಾದ ಬಗೆ; ನೇತ್ರದಾನ ಮಾಡಿ ಉಳಿದವರಿಗೆ ಪ್ರೇರಣೆಯಾದ ಸಾರ್ವಜನಿಕ ಮಾದರಿ; ಸದಾ ಬಿಳಿ ಪಂಚೆ ಮತ್ತು ಶರ್ಟ್ ಧರಿಸಿ, ಅದರಂತೆ ಸ್ವಚ್ಛ ಪಾರದರ್ಶಕವಾಗಿ ಬದುಕಿದ ಮಹಾನ್ ಜೀವ; ಎಲ್ಲ ಆಪಾದನೆ, ಟೀಕೆ, ಟಿಪ್ಪಣಿಗಳಿಗೆ ಮೌನವೇ ಉತ್ತರವಾಗಿಸಿದ ಪರಿ ... ಹೀಗೆ ಡಾ.ರಾಜಕುಮಾರ್ ವ್ಯಕ್ತಿವಿಶೇಷಗಳನ್ನು ಪಟ್ಟಿಮಾಡುತ್ತ ಹೋದರೆ, ಅವರ ಆರಾಧ್ಯ ದೈವ ಹನುಮಂತನ ಬಾಲದಂತೆ ಬೆಳೆಯುತ್ತಲೇ ಹೋಗುತ್ತದೆ.

ಈ ಮೇಲಿನ ಎಲ್ಲ ಅಂಶಗಳು ಡಾ. ರಾಜಕುಮಾರ್ ಅವರ ವಿಭಿನ್ನತೆಯನ್ನು, ವ್ಯಕ್ತಿವಿಶೇಷವನ್ನು, ಅವರು ಹೇಗೆ ಕನ್ನಡಿಗರ ಆರಾಧ್ಯ ದೈವವಾದರು, ಎಲ್ಲಾ ನಟ ಏಕಲವ್ಯರ ದ್ರೋಣಾಚಾರ್ಯರಾದರು, ಮತ್ತು ಅಭಿನಯ ಕಲೆಯ ವಿಶ್ವವಿದ್ಯಾನಿಲಯವಾದರು, ಎನ್ನುವುದನ್ನು ನಮಗೆ ಪರಿಚಯಿಸುತ್ತವೆ. ಇದರಲ್ಲಿ ಹೆಚ್ಚು ವಿಶಿಷ್ಟವೆನಿಸುವ, ವಿಶೇಷವಾಗಿ ಅವರಲ್ಲಿ ಅಡಕವಾಗಿದೆಯೆನಿಸುವ, ಅವರನ್ನು

ಬಂಗಾರದ ಮನುಷ್ಯರೆನಿಸಿದ, ದೇವತಾ ಮನುಷ್ಯನ ಸ್ಥಾನಕ್ಕೇರಿಸಿದ, ಮತ್ತು ಅವರ ವ್ಯಕ್ತಿತ್ವ ರೂಪಿಸಿದ ಕೆಲವು ವಿಚಾರಗಳನ್ನು, ವ್ಯಕಿಗಳ ಕೊಡುಗೆಯನ್ನು ನಿಮ್ಮ ಮುಂದಿಡುವ ಪ್ರಯತ್ನವಿದು.

**ರಾಮ ಲಕ್ಷ್ಮಣ**:

ಡಾ. ರಾಜಕುಮಾರ್ ಹತ್ತಿರದಿಂದ ಬಲ್ಲ ಎಲ್ಲರೂ, ಅವರ ಯಶಸ್ಸಿನ ಹಿಂದೆ, ಮುಂದೆ ಮತ್ತು ಸುತ್ತಲೂ ಇದ್ದ ಒಂದು ಶಕ್ತಿಯನ್ನು ಗುರುತಿಸುತ್ತಾರೆ. ಅವರೇ ರಾಜ್ ಅವರ ತಮ್ಮ ವರದಪ್ಪ. ರಾಜ್ ಗೆ ಅವರು ಮಾರ್ಗದರ್ಶಕ ಮತ್ತು ಎಲ್ಲ ವ್ಯವಹಾರಗಳನ್ನು ನೋಡಿಕೊಳ್ಳುವ ನೆರಳಾಗಿದ್ದರು. ಬರಗೂರು ರಾಮಚಂದ್ರಪ್ಪ ಹೇಳುವಂತೆ ಅವರಿಬ್ಬರೂ ರಾಮ ಲಕ್ಷ್ಮಣರಂತೆ. ರಾಜ್ ಕುಮಾರ್ ರ ಎಲ್ಲ ಚಿತ್ರ ಕಥೆಗಳನ್ನು ಆಯ್ಕೆ ಮಾಡಿ ಅದನ್ನು ನಿರ್ದೇಶಕರೊಂದಿಗೆ ಚರ್ಚಿಸಿ, ಚಿತ್ರಸಂಭಾಷಣೆಯನ್ನು ಪರಿಶೀಲಿಸಿ, ಎಲ್ಲೂ ಅಪಾರ್ಥದ ಸಂಭಾಷಣೆ, ಸನ್ನಿವೇಶ, ದೃಶ್ಯ ಬಾರದಂತೆ, ರಾಜ್ ಸಿನಿಮಾ ಇಡೀ ಮನೆ ಮುಂದೆ ಒಟ್ಟಿಗೆ ಕುಳಿತು ನೋಡುವ ಗುಣ ಮಟ್ಟದ ಎಚ್ಚರ ವಹಿಸಿ ಮುತ್ತುರಾಜ್ ರನ್ನು ತೆರೆಮೇಲಿನ ರಾಜಕುಮಾರ್ ಆಗಿ ರೂಪಿಸುವಲ್ಲಿ ದೊಡ್ಡ ಕೊಡುಗೆ ವರದಪ್ಪರವರದ್ದು. 'ಆಕಸ್ಮಿಕ' ಚಿತ್ರ ನಿರ್ದೇಶಕ ನಾಗಾಭರಣ ಹೇಳುವಂತೆ, ಒಂದು ದೃಶ್ಯದಲ್ಲಿ ರಾಜ್ ಪಾತ್ರ ಬಾರ್**ಗೆ** ಹೋಗಿ ರೌಡಿಗಳ ಸದೆಬಡಿವ ದೃಶ್ಯವಿತ್ತು. ಆಗ ವರದಪ್ಪ ಸೂಕ್ಷ್ಮವಾಗಿ 'ಈ ಪಾತ್ರಕ್ಕೆ ಬಾರ್ ಗೆ ಹೋಗುವ ಮನಸ್ಥಿತಿ ಇದೆ ಎನ್ನುವ ಸಂದೇಶ ಕೊಟ್ಟಂತಾಗುತ್ತದೆ. ರಾಜ್ ಅಭಿಮಾನಿಗಳು, ರಾಜ್ ಮಾಡಿದರೆ ಇದು ಸರಿಯೆಂದು ತಾವು ಮಾಡಲು ಮನಸ್ಸು ಮಾಡುತ್ತಾರೆ' ಎಂದು ಹೇಳಿ ಆ ದೃಶ್ಯ ಬದಲಾಯಿಸಲು ಸೂಕ್ಷ್ಮವಾಗಿ ಹೇಳುತ್ತಾರೆ. ಒಟ್ಟಾರೆ, ರಾಜ್ ಸಿನಿಮಾ ತಪ್ಪು ಸಂದೇಶ ಕೊಡದಂತೆ ಜಾಗ್ರತೆ ವಹಿಸಿದ್ದು ವರದಪ್ಪ, ಹೀಗಾಗಿ, ರಾಜ್ ಸಿನಿಮಾ ಜನರಿಗೆ ಸರಿಯಾಗಿ ಬಾಳುವ ದಾರಿ ತೋರಿಸಿತು.

ತನ್ನನ್ನು ಕಾಣಲು ಬಂದಂತಹ ಎಲ್ಲ ನಿರ್ದೇಶಕರಲ್ಲಿ ರಾಜ್ ಹೇಳುತ್ತಿದ್ದುದು ಇಷ್ಟೇ, 'ಮೊದಲು ವರದಪ್ಪರಲ್ಲಿ ಚಿತ್ರಕತೆ ಚರ್ಚಿಸಿ, ಅವರು ಸರಿ ಎಂದರೆ ನನಗೆ ಅಡ್ಡಿಯಿಲ್ಲ'. ತಮ್ಮನ ಮೇಲೆ ಅಷ್ಟೊಂದು ನಂಬಿಕೆ. ಇದು ಮುಂದುವರಿದು, ರಾಜ್ ಮಕ್ಕಳ ಸಿನಿಮಾ ನಿರ್ವಹಣೆಯಲ್ಲೂ ಅವರ ಪಾತ್ರ ಮಹತರದ್ದು. ವರದಪ್ಪರನ್ನು 'ನಿರ್ದೇಶಕರ ನಿರ್ದೇಶಕ'ರೆನ್ನುತ್ತಾರೆ. ರಾಜ್ ಸಿನಿಮಾ ಮಾಡುವುದಕ್ಕೋಸ್ಕರ ಅವರು ಕನ್ನಡದ ಹೆಚ್ಚಿನ ಕಾದಂಬರಿಗಳನ್ನು ಓದಿದ್ದರು. ಸಿನಿಮಾದ ಬಗ್ಗೆ ಅಗಾಧ ಜ್ಞಾನ, ಅರಿವು, ದೂರದೃಷ್ಟಿ ಹೊಂದಿದ್ದರೂ, ವರದಪ್ಪ ತಾನು ಏನು ನಿರೀಕ್ಷಿಸದೆ ತನ್ನ ಜೀವನವನ್ನೇ ರಾಜ್ ಸೇವೆಗೆ ಮೀಸಲಿಟ್ಟರು. ಅವರಿಬ್ಬರ ನಂಟು ಎಷ್ಟು ಆಳವಾಗಿತ್ತೆಂದರೆ, ವರದಪ್ಪ ಫೆಬ್ರುವರಿ ಲಕ್ಕೆ ತೀರಿಕೊಂಡರೆ, ಒಂದು ತಿಂಗಳ ನಂತರ ಏಪ್ರಿಲ್ ೧೨ರಂದು ರಾಜ್ ಅಸ್ತಂಗತರಾಗುತ್ತಾರೆ. ವರದಪ್ಪ ಸಾವಿನ ನಂತರ ಬಹಳ ಖಿನ್ನರಾದ ರಾಜ್ ಎಲ್ಲರೊಂದಿಗೆ ಹೇಳುತಿದ್ದ ಮಾತೊಂದೆ,'ಲಕ್ಷ್ಮಣ ಹೋದಮೇಲೆ ರಾಮನಿಗೇನು ಇಲ್ಲಿ ಕೆಲಸ'. ಅವರ ಶಿಸ್ತುಬದ್ಧ, ಆರೋಗ್ಯಕರ ಜೀವನಕ್ರಮದಿಂದಾಗಿ ಇನ್ನೂ ಹೆಚ್ಚು ಕಾಲ ಬದುಕುವ ದೇಹಶಕ್ತಿ ಇತ್ತು. ಆದರೆ, ತಮ್ಮ ವರದಪ್ಪನ ಸಾವಿನ ನಂತರ, ಬದುಕುವ ಇಚ್ಛೆ ಕಳೆದುಕೊಂಡು ಇಚ್ಛಾ ಮರಣಿಯಾದರು.

ಶಿವ ಪಾರ್ವತಿ:

ತಂದೆ ಕೊಟ್ಟ ಮಾತನ್ನು ಉಳಿಸೋದಕ್ಕಾಗಿ ಪಾರ್ವತಮ್ಮರನ್ನು ಮದುವೆಯಾದ ರಾಜ್, ಕೊನೆತನಕ, ಯಶಸ್ಸಿನ ಶಿಖರವೇರಿದ ಮೇಲೂ, ಆದರ್ಶ ಪತಿಯಾಗಿಯೇ ಬಾಳಿದರು. ತನಗಿಂತ ಹೆಚ್ಚಿಗೆ ಓದಿದ ಹೆಂಡತಿಯ ಸಲಹೆ ಪಡೆಯುತ್ತಲೇ, ಅವರನ್ನು ಅತ್ಯಂತ ಗೌರವದಿಂದ ಕಂಡು, ಸದಾ ಜೊತೆಯಲ್ಲಿಯೇ ಕರೆದುಕೊಂಡು ಹೋಗುತ್ತಿದ್ದರು. ತನ್ನ ಸಿನಿಮಾದ ಎಲ್ಲ ಜವಾಬ್ದಾರಿಯನ್ನು ಹೆಂಡತಿಗೆ ಕೊಟ್ಟು, ಮುಂದೆ ಪಾರ್ವತಮ್ಮ ನಿರ್ಮಾಪಕಿಯಾಗಲು ಉತ್ತೇಜನ ಕೊಟ್ಟರು. ವರದಪ್ಪರೊಂದಿಗೆ, ಪಾರ್ವತಮ್ಮ ಸಹ ರಾಜ್ ಸಿನಿಮಾದ ಕಥೆ ಹುಡುಕಾಟಕ್ಕಾಗಿ ಕನ್ನಡದ ಕಾದಂಬರಿಗಳನ್ನು ಹೆಚ್ಚಾಗಿ ಓದುತಿದ್ದರು, ಅಲ್ಲದೆ, ರಾಜ್ ಮತ್ತು ಅವರ ಮಕ್ಕಳ ಹೆಚ್ಚಿನ ಸಿನೆಮಾಗಳ ಇಡೀ ಚಿತ್ರನಿರ್ವಹಣೆಯನ್ನು ಅವರೆ ಮಾಡಿದ್ದಾರೆ. ಭಾರತೀಯ ಚಿತ್ರರಂಗದಲ್ಲಿ ಅತಿ ಹೆಚ್ಚು ಸಿನಿಮಾ ನಿರ್ಮಿಸಿದ ಮಹಿಳೆ ಎನ್ನುವ ಖ್ಯಾತಿ

ಪಾರ್ವತಮ್ಮರವರಿಗೆ ಇನ್ನೂ ಇದೆ.

**ವೈವಿಧ್ಯ ಪಾತ್ರಗಳು**:

ಹಿಂದಿಯ ಹೆಸರಾಂತ ನಟ ದಿಲೀಪ್ ಕುಮಾರ್ ಹೇಳುವಂತೆ ರಾಜಕುಮಾರ್ ರಂತೆ ಇಷ್ಟೊಂದು ವೈವಿಧ್ಯ ಪಾತ್ರಗಳನ್ನು ಮಾಡಿದ ಇನ್ನೊಬ್ಬ ನಟ ಭಾರತೀಯ ಚಿತ್ರರಂಗದಲ್ಲಿ ಇಲ್ಲ. ಆಡು ಮುಟ್ಟದ ಸೊಪ್ಪಿಲ್ಲ. ರಾಜ್ ಮಾಡದ ಪಾತ್ರವಿಲ್ಲ. ಭಕ್ತಿ ಪ್ರಧಾನ ಚಿತ್ರಗಳಿಂದ ಸಿನಿಮಾ ಜೀವನ ಆರಂಭಿಸಿದ ರಾಜ್, ಭೇಡರ ಕಣ್ಣಪ್ಪ, ಭಕ್ತ ಕುಂಬಾರ, ಭಕ್ತ ಚೇತ, ಕಭೀರ, ಸಂತ ತುಕಾರಾಂ, ವಾಲ್ಮೀಕಿ, ಓಹಿಲೇಶ್ವರ, ಹಿರಣ್ಯಕಶುಪು, ಬಬ್ರುವಾಹನ, ಸತ್ಯ ಹರಿಶ್ಚಂದ್ರ, ಚಂದ್ರಹಾಸ, ಪಾತ್ರಗಳನ್ನು ತೆರೆಯ ಮೇಲೆ ತಂದು ಇನ್ನೊಮ್ಮೆ ಜೀವಂತವಾಗಿಸಿದರು. ಪೌರಾಣಿಕ ಪಾತ್ರಗಳ ಮೂಲಕ ಪುರಾಣದ ಮರುಸೃಷ್ಟಿ ಮಾಡಿದರು.

ಐತಿಹಾಸಿಕ ಪಾತ್ರಗಳಿಂದ, ಮುಖ್ಯವಾಗಿ ಕರ್ನಾಟಕದ ಇತಿಹಾಸವನ್ನು ಅವರ ಪಾತ್ರಗಳ ಮೂಲಕ ಮತ್ತೊಮ್ಮೆ ದರ್ಶನ ಮಾಡಿಸಿದರು. ಇಲ್ಲಿ ಮುಖ್ಯವಾಗಿ ಹೆಸರಿಸುವಂತಹದ್ದು; ಭಕ್ತ ಕನಕದಾಸ, ಪುರಂದರ ದಾಸ, ಕವಿರತ್ನ ಕಾಳಿದಾಸ, ಸಂತ ಕಬೀರ, ಸಂತ ತುಕಾರಾಂ, ರಣಧೀರ ಕಂಠೀರವ, ಮಯೂರ, ಮಲ್ಲಸರ್ಜ, ಶ್ರೀಕೃಷ್ಣದೇವರಾಯ, ಇಮ್ಮಡಿ ಪುಲಕೇಶಿ, ವೀರಕೇಸರಿ, ಬಿಜ್ಜಳ, ಕೈವಾರ ನಾರಾಯಣ, ಸರ್ವಜ್ಞ ಇತ್ಯಾದಿ. ತನ್ನ ಪಾತ್ರಗಳಿಂದ ಕರ್ನಾಟಕದ ಚರಿತ್ರೆಯ ವೈಭವದ ಮರುಕಳಿಕೆ ಮಾಡಿಸಿದರು.

ಅವರು ಆಯ್ದುಕೊಂಡ, ವೈವಿಧ್ಯದ ಎಲ್ಲ ವರ್ಗಕ್ಕೂ ಸಲ್ಲುವ ಪಾತ್ರಗಳು ಅವರನ್ನು ಜನಾನುರಾಗಿಯಾಗಿಸಿತು. ಕಮ್ಮಾರನಿಂದ ಕಂಠೀರವನ ಪಾತ್ರದವರೆಗೆ ವೈವಿಧ್ಯತೆ ತೆರೆಯ ಮೇಲೆ ತಂದರು. ಸಾಮಾನ್ಯ ಕೆಳವರ್ಗದ, ಕೆಳಜಾತಿಯ ಪಾತ್ರಗಳಾದ ಕಾವಲುಗಾರ, ಕಮ್ಮಾರ, ಕುರಿಗಾಹಿ, ಕುಂಬಾರ, ರೈತ, ಕೂಲಿಕಾರ, ಅಂಬಿಗ, ಜೀತದಾಳು, ವಾದ್ಯಗಾರರಿಂದ ಹಿಡಿದು, ವೃತ್ತಿನಿರತ ಪತ್ತೇದಾರಿ, ಡಾಕ್ಟರ್, ಲಾಯರ್, ಅಧ್ಯಾಪಕ, ಇತ್ಯಾದಿ ಪಾತ್ರ ಮಾಡಿ ಎಲ್ಲ ಜನರು, ತಮ್ಮನ್ನು ತಾವು ರಾಜ್ ಪಾತ್ರಗಳ ಮೂಲಕ ನೋಡುವಂತಾಯಿತು. ಅಮಿತಾಭ್ ಬಚ್ಚನ್ ಹೇಳುವಂತೆ, 'ನಟನೆ ವಿಷಯಕ್ಕೆ ಬಂದರೆ ಒಂದರಿಂದ ನೂರು ಸ್ಥಾನದವರೆಗೆ ರಾಜಕುಮಾರ್ ಇದ್ದಾರೆ, ಆಮೇಲೆ ಉಳಿದವರು'.

ತನ್ನ ಪಾತ್ರಗಳ ಮೂಲಕ ರಾಜ್ ಸಾಮಾಜಿಕ ಬದಲಾವಣೆ ತಂದರು. ಅವರ 'ಬಂಗಾರದ ಮನುಷ್ಯ' ಯುವ ಜನತೆಯನ್ನು ವ್ಯವಸಾಯಕ್ಕೆ ಕರೆತಂದಿತು. 'ಕಸ್ತೂರಿ ನಿವಾಸ' ದಾನದ ಶ್ರೇಷ್ಠತೆಯನ್ನು ಸಾರಿತು. 'ಜೀವನ ಚೈತ್ರ' ಹೆಂಡದ ಅಂಗಡಿಗಳನ್ನು ಮುಚ್ಚಿಸಿತು.

**ಅಭಿಮಾನಿ ದೇವರುಗಳು**:

ತನ್ನನ್ನು ಬೆಳೆಸಿದ ಅಭಿಮಾನಿಗಳನ್ನು ದೇವರ ಸ್ಥಾನಕ್ಕೇರಿಸಿದ ಮೊದಲ ನಟ ರಾಜಕುಮಾರ್. ಅಭಿಮಾನಿಗಳಿಗೆ ಯಾವತ್ತೂ ನಿರಾಶೆ ಮಾಡದೆ, ಅವರ ಭೇಟಿಗೆ ಸಮಯ ನಿಗದಿ ಮಾಡಿದ ಹಿರಿಮೆ ಅವರದ್ದು. ಈ ಮೊದಲೇ ಹೇಳಿದಂತೆ, ತನಗಿರುವ ಅಭಿಮಾನಿ ವರ್ಗಕ್ಕೆ ತನ್ನ ಸಿನೆಮಾದಿಂದ ಯಾವುದೇ ತಪ್ಪು ಸಂದೇಶ ಸಿಗದಂತೆ ತನ್ನೆಲ್ಲ ಸಿನೆಮಾಗಳಲ್ಲಿ ಎಚ್ಚರ ಕಾಯ್ದುಕೊಂಡಿದ್ದರು. ಸಾಮಾನ್ಯ ಜನರಿಗೆ ಅವರು ಎದ್ದು ನಿಂತು ಕೊಡುತ್ತಿದ್ದ ಮರ್ಯಾದೆ, ಉಳಿದವರಿಗೆ ಪ್ರೇರಣೆ. ಅಗಾಧ ಅಭಿಮಾನಿ ಸಮೂಹವಿದ್ದರೂ, ರಾಜಕೀಯ ಸೇರಿ ಮುಖ್ಯಮಂತ್ರಿಯಾಗುವ ಎಲ್ಲ ಅವಕಾಶವಿದ್ದರೂ, ಇಂತಹ ಆಮಿಷಗಳಿಂದ ಸದಾ ದೂರಕಾಯುವ ದೃಢ ನಿರ್ಧಾರ ಮಾಡಿದ್ದರು. ರಾಜ್ ಗೆ ಎಲ್ಲ ಪಕ್ಷಗಳಲ್ಲಿ ಅಭಿಮಾನಿಗಳಿದ್ದರು, ಹಾಗಾಗಿ ಯಾವುದೇ ಪಕ್ಷಕ್ಕೆ ತನ್ನನ್ನು ಸೀಮಿತಗೊಳಿಸದೆ, ಯಾರಿಗೂ ನಿರಾಶೆ ಮಾಡಲಿಲ್ಲ. ಅಲ್ಲದೆ, ತನ್ನ ವೃತ್ತಿಯಲ್ಲಿ ಪರಾಕಾಷ್ಠೆ ಪಡೆಯುವಷ್ಟೇ ಅವರ ಗುರಿಯಾಗಿತ್ತು, ಹಾಗಾಗಿ ಯಾವುದೇ ಆಮಿಷಗಳು ಅವರನ್ನು ಸೆಳೆಯಲಿಲ್ಲ. ತನ್ನ ಯಶಸ್ಸು ಮತ್ತು ಶ್ರೀಮಂತಿಕೆಯ ದಿನಗಳಲ್ಲೂ ಅವರು ಜನಸಾಮಾನ್ಯರಂತೆ ಬದುಕಿದರು ಹಾಗು ಜನರ ಕಷ್ಟಕ್ಕೆ ಸ್ಪಂದಿಸಿದರು. ಸೆಟ್ ನಲ್ಲಿ ಅವರು ಉಳಿದ ಸಹಕಲಾವಿದರು, ಮತ್ತು ಕಾರ್ಮಿಕರಿಗೆ ಸಿಗುವ ಸವಲತ್ತುಗಳನಷ್ಟೇ ತಾನು ಪಡೆದ ರಾಜ್, ಭಾರತ ಸಿನೆಮಾರಂಗದ ಇತಿಹಾಸದಲ್ಲಿಯೇ ನಿರ್ಮಾಪಕರಲ್ಲಿ ಹಠಹಿಡಿದು ಪ್ರಥಮಬಾರಿ ಸೆಟ್ ನಲ್ಲಿ ಪಂಕ್ತಿಭೋಜನ ಪ್ರಾರಂಬಿಸಿದ ಅಸಾಮಾನ್ಯ

ವ್ಯಕ್ತಿ. ಮುಂದೆ, ಈ ಶ್ರೇಷ್ಠ ಪರಂಪರೆಯನ್ನು ಉಳಿದವರು ಅನುಸರಿಸುತ್ತಾರೆ. ಮುಖ್ಯವಾಗಿ, ರಾಜ್ ಮಾಡಿದ ಪಾತ್ರಗಳು ಎಂದೂ ಸಿಗರೇಟ್ ಸೇದುವುದಿಲ್ಲ, ಮದ್ಯಪಾನ ಮಾಡುವುದಿಲ್ಲ. ಇದನ್ನು ತೆರೆಯ ಹೊರಗೂ ರಾಜ್ ಅನುಸರಿಸುತ್ತಾರೆ. ಅಭಿಮಾನಿಗಳ ಪ್ರೀತಿಯನ್ನು ಎಂದೂ ದುರುಪಯೋಗಮಾಡಿಕೊಳ್ಳದ ರಾಜ್, ಸರಿಯಾಗಿ ಬದುಕುವ ದಾರಿಯನ್ನು ತನ್ನ ಪಾತ್ರಗಳ ಮೂಲಕ ಅಭಿಮಾನಿಗಳಿಗೆ ತೋರಿಸಿಕೊಟ್ಟರು. ಯೋಗ, ಪ್ರಾಣಾಯಾಮ, ಮತ್ತು ವ್ಯಾಯಾಮಗಳ ಮೂಲಕ ಸದಾ ಆರೋಗ್ಯಕರ ದೇಹ ಕಾಪಾಡಿಕೊಂಡು ಅಭಿಮಾನಿಗಳಲ್ಲಿ ಮೆಚ್ಚುಗೆ ಪಡೆದು ಪ್ರೇರಣಾ ಶಕ್ತಿಯಾದ ವ್ಯಕ್ತಿತ್ವ ಅವರದ್ದು. ರಾಜ್ ಊಟ ಮಾಡುವುದನ್ನು ನೋಡುವುದೇ ಚೆಂದ. ಊಟವನ್ನು ನಿಧಾನವಾಗಿ ಆಸ್ವಾದಿಸುತ್ತ, ಉಳಿದವರೂ ಚೆನ್ನಾಗಿ ಊಟಮಾಡುವಂತೆ ನೋಡಿಕೊಳ್ಳುತ್ತಿದ್ದರು. ವಿಶೇಷವೆಂದರೆ, ಒಂದು ಅಗಳನ್ನು ವ್ಯರ್ಥ ಮಾಡುತ್ತಿರಲಿಲ್ಲ. ಅವರೆಂದು ಬಿಸ್ಲೇರಿ ನೀರು ಕುಡಿಯದೇ, ಸಾಮಾನ್ಯರಂತೆ ಸಾದಾ ನೀರು ಕುಡಿಯುತ್ತಿದ್ದರು.

**ಅನ್ನದಾತ ನಿರ್ಮಾಪಕರು**:

ತನಗೆ ಮೊದಲ ಸಿನಿಮಾದಲ್ಲಿ ಅವಕಾಶ ಕೊಟ್ಟ ನಿರ್ಮಾಪಕರಿಂದ ಹಿಡಿದು, ತಮ್ಮ ಸ್ವಂತ ನಿರ್ಮಾಣ ಸಂಸ್ಥೆ ಪ್ರಾರಂಭಿಸುವರೆಗೆ ಸಲಹಿದ ನಿರ್ಮಾಪಕರಿಗೆ ಸದಾ ಋಣಿಯಾಗಿದ್ದ ರಾಜ್, ನಿರ್ಮಾಪಕರನ್ನು 'ಅನ್ನದಾತ'ರೆಂದೇ ಕೃತಜ್ಞತೆ ಸೂಚಿಸುತ್ತಾರೆ. ತನ್ನ ಸಿನಿಮಾದಿಂದ ನಷ್ಟ ಆಗಿದೆ ಎಂದು ಹೇಳಿಕೊಂಡು ತಿರುಗಾಡುತ್ತಿದ್ದ ಕೆಲವು ನಿರ್ಮಾಪಕರನ್ನು ಕರೆದು, ಏನೂ ವಿಚಾರಿಸದೆ, ಅವರಿಗೆ ಫ್ರೀಯಾಗಿ ಡೇಟ್ಸ್ ಕೊಟ್ಟು ಪುನಃ ಸಿನಿಮಾ ಮಾಡಲು ಅವಕಾಶ ಕೊಡುತ್ತಾರೆ. ತನ್ನ ಸಿನಿಮಾ ನಿರ್ಮಾಪಕರಿಗೆ ಲಾಭ ತಂದುಕೊಡುತ್ತಿದೆಯೆಂದು ಗೊತ್ತಿದ್ದರೂ, ಜನ ತನ್ನ ಭಾಗ್ಗೆ ತಪ್ಪು ಸಂದೇಶ ಕೊಡಬಾರದೆಂದು, ಮತ್ತು ತನ್ನಿಂದ ಯಾರಿಗೂ ನಷ್ಟವಾಗಬಾರದೆಂದು ರಾಜ್ ಹೀಗೆ ಮಾಡುತ್ತಾರೆ.

ನಿರ್ದೇಶಕರ ನಟ:

ವಯಸ್ಸಿನ ಭೇದಭಾವವಿಲ್ಲದೆ, ನಿರ್ದೇಶಕರಲ್ಲಿ ಗುರುವನ್ನು ಕಂಡ ವಿದ್ಯಾರ್ಥಿ ಮನೋಭಾವ ರಾಜ್ ಅವರದ್ದು. ಅವರ ಕೊನೆಯ ಚಿತ್ರ ನಿರ್ದೇಶಿಸಿದ ಎಸ್ ನಾರಾಯಣ ಹೇಳಿದಂತೆ, ರಾಜಕುಮಾರ್ ನಿರ್ದೇಶಿಸಲು ಅವರಿಗಿದ್ದ ಭಯವನ್ನು ಗಮನಿಸಿ ಅದನ್ನು ಹೋಗಲಾಡಿಸಲು, ಶೂಟಿಂಗ್ ಆರಂಭಿಸುವ ಮೊದಲೇ, ಸ್ನೇಹಿತನಂತೆ ಬೆರೆಯತೊಡಗಿದರು. ಇದರಿಂದಾಗಿ, ಅವರಿಗೆ ರಾಜ್ ನಿರ್ದೇಶನ ಮಾಡುವುದು ನಿರಾಳವಾಯಿತು. ಒಂದು ಸಿನಿಮಾ ಯಶಸ್ಸಾಗಲು ಎಲ್ಲ ಪಾತ್ರಗಳು ಚೆನ್ನಾಗಿ ತೆರೆಯ ಮೇಲೆ ಮೂಡಬೇಕೆಂಬ ಅರಿವು ರಾಜ್ ಗೆ ಇದ್ದುದ್ದರಿಂದ ಉಳಿದವರ ಪಾತ್ರಗಳು ಚೆನ್ನಾಗಿ ಬರುವಂತೆ, ಮತ್ತು ಸಹಕಲಾವಿದರು ಚೆನ್ನಾಗಿ ಅಭಿನಯಿಸುವಂತೆ ಹುರಿದುಂಬಿಸುತ್ತಿದ್ದರು. ತನಗಿಂತ ಮೊದಲೇ ನಿರ್ದೇಶಕ ಸೆಟ್ ಗೆ ಬಂದರೆ ತನಗೆ ಅದು ಅವಮಾನವೆಂದು ತಿಳಿದಿದ್ದ ರಾಜ್ ಸಮಯಪ್ರಜ್ಞೆ, ಮತ್ತು ಪಾತ್ರಕ್ಕೆ ಮಾಡುವ ಪೂರ್ವಸಿದ್ಧತೆಯಿಂದ ನಿರ್ದೇಶಕರ ಕೆಲಸ ಸುಲಭಗೊಳಿಸುತಿದ್ದರು. ಕೆಲವೊಮ್ಮೆ ಅವರಿಗೆ ತನ್ನ ಅಭಿನಯ ಸರಿಯಾಗಿ ಬಂದಿಲ್ಲವೆನಿಸಿದರೆ, ನಿರ್ದೇಶಕರಲ್ಲಿ ವಿನಯವಾಗಿ ಪುನಃ ಚಿತ್ರಿಸುತ್ತೀರಾ ಎಂದು ಕೇಳಿಕೊಳ್ಳುತಿದ್ದರು. ಕೆಲವು ಸನ್ನಿವೇಶಗಳ ಪರಿಕಲ್ಪನೆಗೆ ಇಡೀ ಚಿತ್ರತಂಡ ತಲೆಕೆಡಿಸಿಕೊಂಡು ಕೂತಿದ್ದರೆ, ರಾಜ್ ಮೌನವಾಗಿ ಗಮನಿಸುತಿದ್ದವರು, ತಕ್ಷಣ ತಮ್ಮ ಸುಂದರ ಪರಿಕಲ್ಪನೆಯನ್ನು ಬಿಚ್ಚಿಟ್ಟಿದನ್ನು ಮತ್ತು ಅದನ್ನು ಸಿನಿಮಾದಲ್ಲಿ ಅಳವಡಿಸಿಕೊಂಡಿದ್ದನ್ನು ಅವರ ಅನೇಕ ನಿರ್ದೇಶಕರು ನೆನಪು ಮಾಡಿಕೊಳ್ಳುತ್ತಾರೆ. ಇದಕ್ಕೆ ಉತ್ತಮ ಉದಾಹರಣೆ, ಅವರ ಪ್ರಸಿದ್ಧ ಹಾಡು 'ನಾದಮಯ...' ಇದರ ದೃಶ್ಯಪರಿಕಲ್ಪನೆ ನಿರ್ದೇಶಕ ಭಗವಾನ್ ಹೇಳುವಂತೆ, ರಾಜ್ ಅವರದ್ದು.

**ಕನ್ನಡಕ್ಕೆ ತನು ಮನ ಧನ**:

ಕರ್ನಾಟಕದ ಇತಿಹಾಸದಲ್ಲಿ, ಸಮಗ್ರ ಕರುನಾಡಿನಲ್ಲಿ ಇಷ್ಟೊಂದು ಜನಪ್ರೀಯತೆ ಪಡೆದ ಬೇರೊಬ್ಬ ನಟ ಇಲ್ಲ. ಕನ್ನಡಕ್ಕಾಗಿ ಗೋಕಾಕ್ ಚಳುವಳಿ ಮಾತ್ರವಲ್ಲದೆ, ತನಗೆ ಸಾಧ್ಯವಾದ ಎಲ್ಲ ಕನ್ನಡಪರ ಚಟುವಟಿಕೆಗಳ ಮೂಲಕ ಕನ್ನಡಿಗರ ಮನ ಗೆದ್ದ ಅಪ್ಪಟ ಕನ್ನಡಪ್ರೇಮ ರಾಜ್ ಅವರದ್ದು. ಅವರು ಹಾಡಿರುವ ಕನ್ನಡ ಗೀತೆಗಳು ನಾಡಗೀತೆಯಷ್ಟೇ

ಜನಜನಿತವಾಗಿವೆ. ಪ್ರಾದೇಶಿಕ ಭಾಷೆಯಲ್ಲಿ ಉತ್ತಮ ನಟ ಪ್ರಶಸ್ತಿ ಪಡೆದ ಮೊದಲ ನಟ ರಾಜಕುಮಾರ್. ಕೆಲ ಜಾತಿಯಲ್ಲಿ ಹುಟ್ಟಿ, ಯಾವುದೇ ಜಾತಿಯ ಬೆಂಬಲವಿಲ್ಲದೆ, ಆರ್ಥಿಕ ಕೆಳಸ್ತರದಲ್ಲಿ ಬೆಳೆದ ರಾಜ್, ಎಲ್ಲ ಅಪಪ್ರಚಾರಕ್ಕೆ ವಿಚಲಿತರಾಗದೆ ಕೇವಲ ಗುರಿ ಮುಟ್ಟುವ ಛಲ ಹೊಂದಿ, ಯಶಸ್ಸು ಸಾಧಿಸಿದ ಮೇಲೂ ಯಾರನ್ನು ದ್ವೇಷಿಸದೆ, ಎಲ್ಲರನ್ನು ತನ್ನವರೆಂದವರು. ರಾಜ್ಯದ ವಿವಿಧ ಜಿಲ್ಲಾ ಕೇಂದ್ರಗಳಲ್ಲಿ 57 ರಸಮಂಜರಿ ಕಾರ್ಯಕ್ರಮ ನೀಡಿ ಆ ದೇಣಿಗೆಯಿಂದ 21 ಜಿಲ್ಲಾ ಕೇಂದ್ರದಲ್ಲಿ ಕ್ರೀಡಾಂಗಣ ನಿರ್ಮಿಸುವಲ್ಲಿ ರಾಜ್ ಕೊಡುಗೆ ಇದೆ. ಇದೂ ಅಲ್ಲದೆ, ಕನ್ನಡ ಸಂಘಗಳಿಗೆ, ವಿದ್ಯುತ್ಚ್ಛಕ್ತಿ ಮಂಡಳಿ, ಮತ್ತು ಪೊಲೀಸ್ ಇಲಾಖೆ, ಕ್ಷೇಮಾಭಿವೃದ್ಧಿಗಾಗಿ ರಸಮಂಜರಿ ಕಾರ್ಯಕ್ರಮ ನಡೆಸಿಕೊಟ್ಟರು. ದೆಹಲಿ ಮತ್ತು ಮುಂಬೈಯಲ್ಲಿ ಕನ್ನಡ ಸಂಘದ ಸ್ವಂತ ಕಟ್ಟಡಕ್ಕಾಗಿ ರಸಮಂಜರಿ ಕಾರ್ಯಕ್ರಮ ನೀಡಿ ನೆರವಾದರು. ರಾಷ್ಟ್ರಕವಿ ಕುವೆಂಪು, 'ನನ್ನ ವಿಶ್ವಮಾನವ ಸಂದೇಶಕ್ಕೆ ನೀವೇ ಯೋಗ್ಯ ವ್ಯಕ್ತಿ' ಎಂದು ರಾಜಕುಮಾರ್ ಬಗ್ಗೆ ಹೇಳುತ್ತಾರೆ.

**ಪಾತ್ರದಲ್ಲಿ ಐಕ್ಯ:**

206 ಚಿತ್ರಗಳಲ್ಲಿ ಅಭಿನಯಿಸಿದ ರಾಜ್ ಸಿನಿಮಾ ಯಶಸ್ಸು ಸುಮಾರು 93%. ಬಹುಶಃ, ಯಾವುದೇ ಪ್ರತಿಫಲ ಅಪೇಕ್ಷೆಯಿಲ್ಲದೆ ಕೇವಲ ತನ್ನ ಕೆಲಸವನ್ನಷ್ಟೇ ಪ್ರೀತಿಸಿ, ಆರಾಧಿಸಿ, ಧ್ಯಾನಿಸಿ, ಅಭಿನಯ ಕೃಷಿಯಲ್ಲಿ ತನ್ನನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದರಿಂದಲೇ ರಾಜ್ ನ್ನು ಯಶಸ್ಸು ಆಶೀರ್ವಾದಿಸಿರಬೇಕು. ನಿರ್ದೇಶಕ ಬಿ ವಿ ಕಾರಂತ ಹೇಳುವಂತೆ, ರಾಜಕುಮಾರ್ ವಿಶೇಷವೆಂದರೆ, ಅವರು ಬೇರೆಲ್ಲಾ ನಟರನ್ನು ಗೌರವಿಸಿದರೂ, ಅನುಕರಿಸದೆ, ನಟನೆಯಲ್ಲಿ ತನ್ನತನದ ಛಾಪು ಬಿಟ್ಟುಹೋದ ಸ್ವಂತಿಕೆ ಇತ್ತು. ಒಪ್ಪಿಕೊಂಡ ಪಾತ್ರಕ್ಕೆ ಅವರು ಮಾಡಿಕೊಳ್ಳುತ್ತಿದ್ದ ತಯಾರಿ ಎಲ್ಲ ನಟರಿಗೂ ಅನುಕರಣೀಯ. ನಟ ರಾಜೇಶ್ ಹೇಳುವಂತೆ, ರಾಜಕುಮಾರ್ ಯೆಶಸ್ಸಿನ ಗುಟ್ಟು ಅವರ ಶ್ರದ್ಧೆ, ಏಕಾಗ್ರತೆ, ತನ್ಮಯತೆ, ಮತ್ತು ಸ್ಪಷ್ಟ ಕನ್ನಡ ಉಚ್ಚಾರಣೆ. ನಿರ್ದೇಶಕ ಭಗವಾನ್ ಉದಾಹರಿಸುವಂತೆ, ರಾಜ್ ಒಂದು ಪಾತ್ರಕ್ಕಾಗಿ ಕತ್ತಿವರಸೆಯನ್ನು ಎರಡು ತಿಂಗಳುಗಳ ಕಾಲ ಅಭ್ಯಾಸ ಮಾಡಿದ್ದರು. ಅದೇ ರೀತಿ 'ಸನಾದಿ ಅಪ್ಪಣ್ಣ' ಚಿತ್ರದಲ್ಲಿ ಶಹನಾಯಿ ಊದುವ ನೈಜ್ಯ ಆಂಗಿಕ ಅಭಿನಯ ಅಂತರ್ಗತ ಮಾಡಿಕೊಳ್ಳಲು ಆ ಚಿತ್ರಕ್ಕಾಗಿ ಕರೆಸಿದ ಶೆಹನಾಯಿ ವಾದಕ ಬಿಸ್ಮಿಲ್ಲಾಹ್ ಖಾನ್ ಶೆಹನಾಯಿ ಊದುವುದನ್ನು ದಿನಗಟ್ಟಲೆ ತದೇಕಚಿತ್ತದಿಂದ ಗಮನಿಸುತ್ತ ಕಲಿತರು. ನಿರ್ದೇಶಕ ಎಸ್ ನಾರಾಯಣ ಹೇಳುವಂತೆ, ಅವರ ಸಿನಿಮಾದ ಒಂದು ಹಾಡಿನ ಚಿತ್ರೀಕರಣ ಮಾಡುವಾಗ ಹಿಮಾಲಯದ ತಪ್ಪಲಲ್ಲಿ ಬೇರೆಲ್ಲ ಕಲಾವಿದರು ಚಳಿಯಲ್ಲಿ ಕುಸಿದು ಹೋದರೆ, ಇಳಿ ವಯಸ್ಸಿನ ರಾಜ್ ಮಾತ್ರ ಲವಲವಿಕೆಯಿಂದಿದ್ದರು. ಭಕ್ತಿಗೀತೆಗಳನ್ನು ಹಾಡುವಾಗ ಮತ್ತು ನಟಿಸುವಾಗ ರಾಜ್ ಎಂದೂ ಚಪ್ಪಲಿ ಧರಿಸುತ್ತಿರಲಿಲ್ಲ. ಹಾಡುವುದು ಮೂಲವೃತ್ತಿಯಾಗಿರದಿದ್ದರೂ, ದಿನಕ್ಕೆ ಎರಡು ಗಂಟೆ ನಿತ್ಯ ಅಭ್ಯಾಸಮಾಡಿ ನಾಡಿನ ಶ್ರೇಷ್ಠ ಗಾಯಕರಾಗುತ್ತಾರೆ. ಅವರು ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ಕರಗತ ಮಾಡಿಕೊಂಡಿದ್ದು ಹೆಚ್ಚಿನವರಿಗೆ ಅರಿವಾಗಿರಲಿಲ್ಲ. ಚಿತ್ರೀಕರಣವಿದ್ದಾಗ, ರಾತ್ರಿ ಊಟದ ನಂತರ ಮಾರನೆಯ ದಿನದ ಸಂಭಾಷಣೆಗಳನ್ನು ಅಭ್ಯಸಿಸಿ ಮಲಗುತ್ತಿದ್ದರು. ತನ್ನ ಭಾಗದ ಚಿತ್ರೀಕರಣವಿಲ್ಲದಿದ್ದರೂ, ಸೆಟ್ನಲ್ಲಿ ಉಳಿದುಕೊಂಡು, ಇತರರ ಅಭಿನಯ ಗಮನಿಸುತ್ತಾ, ಅವರಿಂದ ತಾನೇನಾದರೂ ಕಲಿಯಬಹುದೇನೋ ಎನ್ನುವ ಮನೋಭಾವದ ವಿದ್ಯಾರ್ಥಿಯಾಗಿದ್ದರು.

ಆತಿಥ್ಯಕ್ಕೆ ಹೆಸರು:

ರಾಜಕುಮಾರ್ ಆತಿಥ್ಯ ಅನುಭವಿಸಿದವರು ಅದನೆಂದು ಮರೆಯಲಾರರು. ಮನೆಗೆ ಬಂದವರಿಗೆ ಊಟ ಮಾಡಿಸದೆ ಕಳುಹಿಸುತ್ತಿರಲಿಲ್ಲ. ಅತಿಥಿಗಳನ್ನು ಗೇಟ್ ನವರೆಗೆ ಕರೆದುಕೊಂಡು ಹೋಗಿ ಬೀಳ್ಕೊಡುವ ವಿಶಿಷ್ಟ ಪರಂಪರೆಯನ್ನು, ಬಂದವರು ಸಾಮಾನ್ಯರಾಗಿದ್ದರೂ, ತಪ್ಪದೆ ಪಾಲಿಸುತ್ತಿದ್ದರು. ಯಾರ ಭಾಗ್ಗೆಯೂ ಕೆಟ್ಟ ಮಾತನ್ನೂ ಆಡದ, ಬೇರೆಯವರು ಆಡುವುದನ್ನು ಉತ್ತೇಜಿಸದ ಮಹಾನ್ ವ್ಯಕ್ತಿತ್ವ ಅವರದಾಗಿತ್ತು.

**ಅಸ್ತಂಗತವಾದ ಮಗುವಿನ ಮನಸ್ಸು:**

1993ರಲ್ಲಿ ನೇತ್ರದಾನ ಮಾಡುತ್ತೇನೆ ಎಂದು

ನಿರ್ಧರಿಸಿದ ರಾಜ್ ಕರೆಯಿಂದಾಗಿ ೨೪,೦೦೦ ಜನರು ಕರ್ನಾಟಕದಲ್ಲಿ ನೇತ್ರದಾನ ಪಣ ತೊಟ್ಟರು. ಸದಾ ಬಿಳಿ ಪಂಚೆ ಮತ್ತು ಶರ್ಟ್ ಧರಿಸಿ, ಅದರಂತೆ ಸ್ವಚ್ಛ ಪಾರದರ್ಶಕ ಬದುಕಿದ ಮಹಾನ್ ಜೀವ, ಹಲವು ಆಪಾದನೆಗಳಿಗೆ ತುತ್ತಾಗಿದ್ದು ಉಂಟು. ಆದರೆ, ರಾಜ್ ಅದನ್ನು ನಿರ್ವಹಿಸಿದ ನಡೆ ಮಾತ್ರ ಶ್ಲಾಘನೀಯ. ಎಲ್ಲದಕ್ಕೂ ಮೌನವನ್ನೇ ಉತ್ತರವಾಗಿಸಿ ಮುನ್ನಡೆದರು. ಆಪಾದನೆಗಳು ಕಾಲಕ್ರಮೇಣ ಹಿಂದೆ ಸರಿದವು. 'ಶ್ರೀ ಮಂತ್ರಾಲಯ ಮಹಾತ್ಮೆ' ಸಿನಿಮಾದಲ್ಲಿ ಕೆಳಜಾತಿಯ ರಾಜಕುಮಾರ್ ದೇವರ ಪಾತ್ರ ಮಾಡಬಾರದು ಎಂದು ಕೆಲಜನರು ಹೇಳಿದ್ದನ್ನು ಕೇಳಿದ ರಾಜ್ ಹಿಂದೆ ಸರಿದರು. ಆ ಮೇಲೆ ಚೀಟಿ ಹಾಕಿ ಅವರ ಹೆಸರೇ ಬಂದದ್ದರಿಂದ, ದೇವರ ಆಜ್ಞೆಯೆಂದು ಒಪ್ಪಿಕೊಂಡರು.

ರೈತನಾಗಿ ಗಾಜನೂರಿನಲ್ಲಿ ತನ್ನ ಕೊನೆಯ ದಿನಗಳನ್ನು ಕಳೆಯಬೇಕೆಂದು ಬಯಸಿದ್ದರು. ಅಭಿಮಾನಿಗಳಿಗಾಗಿ, 'ಭಕ್ತ ಅಂಬರೀಶ' ಸಿನಿಮಾ ಮಾಡುವ ತಯಾರಿಯಲ್ಲಿದ್ದರು. ಚಿ.ಉದಯಶಂಕರ್ ಬರೆದಿದ್ದ ೯ ಭಕ್ತಿಗೀತೆಗಳಿಗೆ, ತಾವೇ ಸಂಗೀತ ಸಂಯೋಜಿಸಿ, ವಿ. ಮನೋಹರ್ ಮುಂದಾಳತ್ವದಲ್ಲಿ ಧ್ವನಿಸುರುಳಿ, ಚಿ.ಉದಯಶಂಕರಗೆ ಶ್ರದ್ಧಾಂಜಲಿಯಾಗಿ ಬಿಡುಗಡೆ ಮಾಡಬೇಕೆಂದುಕೊಂಡಿದ್ದರು, ಅದ್ಯಾವುದೂ ನರವೇರಲಿಲ್ಲ.

ಕೊನೆಯದಾಗಿ, ಡಾ. ರಾಜಕುಮಾರ್ ಬಿಟ್ಟುಹೋದ ಸಾಧನೆಯ ಹೆಜ್ಜೆಗುರುತು ಅನುಕರಣೀಯ, ಅವರ ಜೀವನ ಯಾತ್ರೆ ಎಲ್ಲರಿಗೂ ಮಾರ್ಗದರ್ಶಕ. ರಾಜ್ ಕೇವಲ ಅಭಿನಯ ಕಲೆಗಷ್ಟೇ ವಿಶ್ವವಿದ್ಯಾನಿಲಯವಲ್ಲ, ಜೀವನವನ್ನು ಸಮೃದ್ಧವಾಗಿ, ಅರ್ಥಪೂರ್ಣವಾಗಿ ಬದುಕಲು ಒಂದು ಪ್ರೇರಕ ದಿಕ್ಸೂಚಿ, ಸಮಗ್ರ ಗ್ರಂಥ. ಯಾವುದೇ ಹಿನ್ನೆಲೆಯಿಲ್ಲದೆ ಚಿತ್ರರಂಗಕ್ಕೆ ಬಂದು ಇಡೀ ಕರ್ನಾಟಕಕ್ಕೆ ಪ್ರೀತಿಪಾತ್ರರಾದ ರಾಜಕುಮಾರ್ ಅವರಂತೆ ನಾವಾಗಬೇಕೆಂದು ಕನಸು ಕಾಣುವ ಉದಯೋನ್ಮುಖ ನಟರು, ಬರಿ ಅವರ ತೆರೆಯ ಮೇಲಿನ ಅಭಿನಯ ನೋಡಿದರೆ, ರಾಜಕುಮಾರ್ ಸಂಪೂರ್ಣ ಅರಿವಾಗುವುದಿಲ್ಲ. ಅವರ ತೆರೆಯ ಹಿಂದಿನ ಬದುಕು, ಶಿಸ್ತುಬದ್ಧ ಜೀವನ, ಪರಿಶ್ರಮ, ಅವರು ಅಭಿಮಾನಿಗಳು, ನಿರ್ದೇಶಕರು, ನಿರ್ಮಾಪಕರು, ಹಾಗು ಸಹಕಲಾವಿದರುಗಳಿಗೆ ಕೊಡುತ್ತಿದ್ದ ಗೌರವ, ತನ್ನ ಸ್ಥಾನದ ಜವಾಬ್ದಾರಿ ಅರಿತು ಸಾರ್ವಜನಿಕವಾಗಿ ನಡೆದುಕೊಂಡ ರೀತಿ, ಒಟ್ಟಾರೆಯಾಗಿ ಅವರ ಸಂಪೂರ್ಣ ಜೀವನವನ್ನು ಅಂತರ್ಗತಮಾಡಿಕೊಂಡರೆ ಮಾತ್ರ, ರಾಜಕುಮಾರ್ ನಡೆದ ದಾರಿಯಲ್ಲಿ ಹೆಜ್ಜೆ ಇಡುವ ಪ್ರಯತ್ನ ಮಾಡಬಹುದು. ಒಂದು ಶ್ರೇಷ್ಠ ಅಭಿನಯ ತೆರೆಯ ಮೇಲೆ ಮೂಡುವ ಹಿಂದೆ ಸಾಕಷ್ಟು ಪರಿಶ್ರಮವಿರುತ್ತದೆ. ಇದನ್ನು, ರಾಜಕುಮಾರ್ ಎಂಬ 'ಅಭಿನಯಕಲಾ ವಿಶ್ವವಿದ್ಯಾನಿಲಯ'ದ ವಿದ್ಯಾರ್ಥಿಯಾದರೆ ಮಾತ್ರ ಅಂತರ್ಗತ ಮಾಡಿಕೊಳ್ಳಬಹುದು.

## ಗ್ರಂಥಋಣ:

1. ಪುನೀತ್ ರಾಜಕುಮಾರ್ ಮತ್ತು ಪ್ರಕೃತಿ ಬನವಾಸಿ. *ವ್ಯಕ್ತಿತ್ವದ ಹಿಂದಿರುವ ವ್ಯಕ್ತಿ*. ಪಾರ್ವತಮ್ಮ ಪಬ್ಲಿಕೇಷನ್ಸ್. ೨೦೧೨.
2. ದೊಡ್ಡಹುಲ್ಲೂರು ರುಕ್ಕೋಜಿ. *ಡಾ. ರಾಜಕುಮಾರ್ ಸಮಗ್ರ ಚರಿತ್ರೆ*. 2015.